ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಲೋಕೋಪಯೋಗಿ ಇಲಾಖೆ (ಸಂಪರ್ಕ ಮತ್ತು ಕಟ್ಟಡಗಳಿಗೆ ಸಂಬಂಧಿಸಿದಂತೆ) ಯಲ್ಲಿ ಮತ್ತು ನೀರಾವರಿ ಇಲಾಖೆಯಲ್ಲಿ ೧.೪-೮೮ರಂತೆ ೩೭೭೮ ೩೧ ಲಕ್ಷ ರೂಗಳ ಪೆಂಡಿಂಗ್ ಬಿಲ್ಲುಗಳಿರುತ್ತವೆ.

ವರ್ಷವಾರು ಮಾಹಿತಿಗಳನ್ನು ಈ ಕೆಳಗೆ ಕೊಡಲಾಗಿದೆ.

ವಿವರ	೧೯೮೫-೮೬	೧೯೮೬-೮೭	೧೯೮೭-೮೮	ಒಟ್ಟು
	(ಲಕ್ಷ ರೂಗಳಲ್ಲಿ)			
೧	೨	೩	೪	೫
ನೀರಾವರಿ ಇಲಾಖೆ	೭.೦೭	೭೧.೦೭	೨೧೧೯.೪೬	೨೧೯೬.೭೦
ಸಂಪರ್ಕ ಮತ್ತು ಕಟ್ಟಡಗಳು	೨೦.೧೦	೨೮೩.೦೦	೧೩೫೪.೫೧	೧೫೮೧.೬೧

ಅ) ಈ ಕಾರಣಗಳಿಂದ ಯಾವ ಕಾಮಗಾರಿಗಳು ಸ್ಥಗಿತಗೊಂಡಿರುವುದಿಲ್ಲ.

ಇ) ರಾಜ್ಯದ ಸಾಧನ ಸಾಮಗ್ರಿಗಳನ್ನು ಆಧರಿಸಿ, ಬಾಕಿ ಬಿಲ್ಲುಗಳ ಪಾವತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ತುಂಗಭದ್ರಾ ಎಡ ಕಾಲುವೆಯಲ್ಲಿ ಬಿರುಕು ಉಂಟಾದ ಬಗ್ಗೆ

೨೧೨೨. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) — ಮಾನ್ಯ ಕಂದಾಯ ಮತ್ತು ಯೋಜನೆ ಹಾಗೂ ಬಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಭದ್ರಾ ಎಡ ದಂಡೆಯಲ್ಲಿ ಎಷ್ಟು ಎಕರೆ ಜಮೀನಿಗೆ ನೀರಾವರಿ ಒದಗಿಸಲಾಗುತ್ತದೆ?

ಆ) ಈ ವರ್ಷ ಇತ್ತೀಚೆಗೆ ಬಿರುಕು ಬಿಟ್ಟಾಗ ಅದನ್ನು ರಿಪೇರಿ ಮಾಡಲು ಎಷ್ಟು ಕಾಲಾವಧಿ ತೆಗೆದುಕೊಳ್ಳಲಾಯಿತು ?

ಇ) ರಿಪೇರಿ ಆದ ಮೇಲೆ ಎಲ್ಲಾ ಭಾಗಗಳಲ್ಲೂ ನೀರು ಬಿಡಲು ಎಷ್ಟು ಕಾಲ ತೆಗೆದುಕೊಂಡಿತು? ಹಾಗೂ ಬಿರುಕಿನಿಂದ ಆದ ನಷ್ಟವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಮಂತ್ರಿಗಳು).—

ಅ) ಈಗಿನ ಯೋಜನೆಯ ಪ್ರಕಾರ ಎಡದಂಡೆ ಮೇಲ್ಮಟ್ಟದ ನಾಲೆಯ ಕೆಳಗೆ ೧೫೫೮ ಎಕರೆ ಹಾಗೂ ಎಡದಂಡೆ ಕೆಳಮಟ್ಟದ ನಾಲೆಯ ಕೆಳಗೆ ೬೦೨೬೯ ಎಕರೆಗಳು.

ಆ) ದಿನಾಂಕ ೩೦-೧-೮೮ರಿಂದ ೧೧-೨-೮೮ರವರೆಗೆ ಹದಿಮೂರು ದಿವಸಗಳು.

ಇ) ಹದಿಮೂರು ದಿವಸಗಳ ಕಾಲ ದುರಸ್ತಿ ಕೆಲಸ ಪೂರ್ಣಗೊಂಡ ತಕ್ಷಣವೇ ೦೨-೨-೮೮ರಂದೇ ಹಂತ ಹಂತವಾಗಿ ನೀರನ್ನು ನಾಲೆಯಲ್ಲಿ ಬಿಡಲಾಗಿದ್ದರೂ ನಷ್ಟ ಅಂದಾಜು ಮಾಡಲಾಗಿಲ್ಲ.

ಸಣ್ಣ ನೀರಾವರಿಗೆ ಒದಗಿಸಿದ ಮೊತ್ತ

೧೪೦೪. ಶ್ರೀ ಆರ್. ವೆಂಕಟರಾಮಯ್ಯ(ಮುಳಬಾಗಿಲು) —ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ ಮತ್ತು ೧೯೮೭-೮೮ರ ಆಯವ್ಯಯದಲ್ಲಿ ಸಣ್ಣ ನೀರಾವರಿಗೆ ಅನುಕ್ರಮವಾಗಿ ಕೊಟ್ಟಿರುವ ಮತ್ತು ನಿಗದಿಪಡಿಸಿರುವ ಮೊತ್ತವೆಷ್ಟು ?

ಆ) ಸದರಿ ನೀರಾವರಿಯಿಂದ ನೀರಾವರಿಯಾದ ಜಮೀನಿನ ವಿಸ್ತೀರ್ಣವೆಷ್ಟು ?

ಇ) ಸದರಿ ನೀರಾವರಿ ತಗುಲಿದ ವೆಚ್ಚವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ)

ವರ್ಷ	ಅನುದಾನ(ಲಕ್ಷ ರೂ.ಗಳಲ್ಲಿ)
೧೯೮೬-೮೭	೩೪೬೫
೧೯೮೭-೮೮	೩೫೬೬ (ಆಯವ್ಯಯದಲ್ಲಿ ನಿಗದಿ ಪಡಿಸಿದ ಅನುದಾನ) ೩೧೪೬ (ಪರಿಷ್ಕೃತ ಅಂದಾಜಿನಂತೆ ನಿಗದಿಪಡಿಸಿದ ಅನುದಾನ)

ಆ)

ವರ್ಷ	ಗುರಿ (ಹೆಕ್ಟೇರುಗಳಲ್ಲಿ)	ಸಾಧನೆ(ಹೆಕ್ಟೇರುಗಳಲ್ಲಿ)
೧೯೮೬-೮೭	೫,೦೦೦	೬,೦೭೪
೧೯೮೭-೮೮	೧೧,೦೦೦(ಮೂಲ ಅಂದಾಜಿನಂತೆ) ೭,೦೦೦ (ಪರಿಷ್ಕೃತ ಅಂದಾಜಿನಂತೆ)	೫.೫೩೧

ಇ)

ವರ್ಷ	ವೆಚ್ಚ (ಲಕ್ಷ ರೂ. ಗಳಲ್ಲಿ)
೧೯೮೬-೮೭ ರಲ್ಲಿ ಸಣ್ಣ ನೀರಾವರಿ ಯೋಜನೆಗಳಿಗೆ	೩೬೨೪ ೨೪೧೮

ಕಂಬಳಿಹಳ್ಳಿ ಬಳಿ ಇರುವ ರಸ್ತೆ ಶುಲ್ಕ ವಸೂಲಿ ಬೂತ್ ಬಗ್ಗೆ

೨೫೧೬. ಶ್ರೀ ಆರ್. ವೆಂಕಟರಾಮಯ್ಯ(ಮುಳಬಾಗಿಲು).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೋಲಾರ-ಮುಳಬಾಗಿಲು ಮಧ್ಯೆ ಕಂಬಳಿಹಳ್ಳಿ ಬಳಿ ಎನ್. ಹೆಚ್. ೪ ನಲ್ಲಿ ಸ್ಥಾಪಿಸಿರುವ ರಸ್ತೆ ಶುಲ್ಕ ವಸೂಲಿ ಬೂತ್ ಯಾವಾಗಿನಿಂದ ಶುಲ್ಕ ವಸೂಲಿ ಮಾಡುತ್ತಿದೆ : (ವರ್ಷವಾರು ಮತ್ತು ಸರಾಸರಿ ದಿನದ ವಸೂಲಿ ವಿವರ ನೀಡುವುದು) ;

ಆ) ಕಳೆದ ಮೂರು ವರ್ಷಗಳಲ್ಲಿ ಈ ವಸೂಲಿ ಬೂತ್ ಇದುವರೆವಿಗೂ ವಸೂಲಿ ಮಾಡಲಾಗಿರುವ ಮತ್ತು ಮಾಡಬೇಕಾಗಿರುವ ಹಣವೆಷ್ಟು ;

ಇ) ಶುಲ್ಕ ವಸೂಲಿ ಬೂತನ್ನು ತೆಗೆಯಲು ಬೇಕಾಗುವ ಕಾಲಾವಕಾಶ ಎಷ್ಟು ;

ಈ) ಶುಲ್ಕ ವಸೂಲಿಯ ದಿನದ ಸರಾಸರಿಯಲ್ಲಿ ಪ್ರಾರಂಭದಲ್ಲಿ ಮತ್ತು ಹಾಲಿ ವಸೂಲಾಗುತ್ತಿರುವ ಶುಲ್ಕವೆಷ್ಟು ;

ಉ) ಪ್ರಾರಂಭದಲ್ಲಿ ಜಾಸ್ತಿ ಶುಲ್ಕ ವಸೂಲಾಗುತ್ತಿದ್ದುದ್ದು ಈಗ ಕಡಿಮೆಯಾಗಲು ಕಾರಣವೇನು ?